**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.125/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ಕೆ. ಸುರೇಶಪ್ಪ |
| ತಂದೆಯ ಹೆಸರು | : | ಸಣ್ಣ ಕೆಂಚಪ್ಪ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಮಾದನಭಾವಿ, ನ್ಯಾಮತಿ ತಾಲ್ಲೂಕು |

ಪಿ.ಡಬ್ಲ್ಯೂ 3

ಸಿ.ಡಬ್ಲ್ಯೂ 9

ದಿ: 05-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ನನಗೆ ಚಾಸಾ-1, 6 ರಿಂದ 8, 10 ರಿಂದ 17 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇದೆ. ನಾವು ಮತ್ತು ಆರೋಪಿತರು ಒಂದೇ ಊರಿನವರು ಆದ್ದರಿಂದ ಅವರ ಪರಿಚಯ ಇದೆ. ಚಾಸಾ-1 ರವರು ವ್ಯವಸಾಯ ಮಾಡುತ್ತಾರೆ. ಅವರ ಜಮೀನು ಊರಿನ ದಕ್ಷಿಣ ದಿಕ್ಕಿಗೆ ಬರುತ್ತದೆ. ಆರೋಪಿತರಿಗೂ ಮತ್ತು ಚಾಸಾ-1 ರವರಿಗೆ ಜಮೀನು ವಿಚಾರದಲ್ಲಿ ಗಲಾಟೆ ಆಗಿತ್ತು.

2. ದಿಃ 01-11-2018 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಚಾಸಾ-1 ರವರ ಜಮೀನಿನಲ್ಲಿ ಆರೋಪಿತರು ಚಾಸಾ-1 ರವರ ಜೊತೆ ಹೊಲದಲ್ಲಿ ಕಡ್ಡಿ ಕ್ೊಯ್ದಿದ್ದ ಬಗ್ಗೆ ಜಗಳ ಮಾಡಿ

ಚಾಸಾ-1 ರವರಿಗೆ ಹೊಡೆದು ಹಲ್ಲೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈದರು. ನಂತರ ಚಾಸಾ-1 ರವರು ಮನೆಗೆ ಬಂದರು. ಚಾಸಾ-6 ರವರು ಶಿಕಾರಿಪುರದಲ್ಲಿ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದವರಿಗೆ ವಿಷಯ ತಿಳಿಸಿದರು. ನಂತರ ಚಾಸಾ-6 ರವರು ಶಿಕಾರಿಪುರದಿಂದ ಮನೆಗೆ ಬಂದಾಗ ರಾತ್ರಿ 9.00 ಗಂಟೆ ಆಗಿತ್ತು. ಆಗ ಅವರ ಮನೆಯಲ್ಲಿ ಚಾಸಾ-1, ರತ್ನಮ್ಮ, ಚಾಸಾ-1 ರವರ ಸಹೋದರಿ ಇದ್ದರು. ನಂತರ ಚಾಸಾ-6 ರವರು ಮನೆಗೆ ಬಂದ ನಂತರ ತಂದೆ ತಾಯಿಗೆ ಗಲಾಟೆ ಬಗ್ಗೆ ಕೇಳಿದರು. ಅದಕ್ಕೆ ಚಾಸಾ-1 ರವರು ಜಮೀನಿನಲ್ಲಿ ಎಲ್ಲಾ ಆರೋಪಿತರು ಸೇರಿ ಗಲಾಟೆ ಮಾಡಿದ ಬಗ್ಗೆ ತಿಳಿಸಿದರು. ಆಗ ಗಲಾಟೆ ಯಾಕೆ ಆಯಿತು ಅಂತ ಚಾಸಾ-6 ರವರು ಆರೋಪಿತರ ಬಳಿ ಹೋಗಿ ವಿಚಾರಿಸಿದರು. ಆಗ ರಾತ್ರಿ 9.30 ಗಂಟೆ ಆಗಿತ್ತು. ಆಗ ಎಲ್ಲಾ ಆರೋಪಿತರು ಸೇರಿ ಚಾಸಾ-6 ರವರೊಂದಿಗೆ ಜಮೀನಿನ ವಿಚಾರದಲ್ಲಿ ಗಲಾಟೆ ಮಾಡಿದರು. ಗಲಾಟೆಯಲ್ಲಿ ಆರೋಪಿತರು ಚಾಸಾ-6 ರವರಿಗೆ ಅವಾಚ್ಯ ಶಬ್ದಗಳಿಂದ ಬೈದರು. 3 ನೇ ಆರೋಪಿ ಗಿರಿಜಮ್ಮರವರು ಅವರ ಮನೆಯ ಒಳಗೆ ಹೋಗಿ ಚೂರಿಯನ್ನು ತೆಗೆದುಕೊಂಡು ಬಂದು "ಒಂದು ಎಕರೆ ಜಮೀನು ಹೋಗಲಿ ಚಾಸಾ-6 ರವರನ್ನು ಕೊಲೆ ಮಾಡು" ಅಂತ ಹೇಳಿ 1 ನೇ ಆರೋಪಿಯ ಕೈಗೆ ಚೂರಿಯನ್ನು ಕೊಟ್ಟರು. ಚಾಸಾ-6 ರವರಿಗೆ 1 ನೇ ಆರೋಪಿಯು ಚೂರಿಯಿಂದ ಹೊಟ್ಟೆ ಬೆನ್ನು, ಪಕ್ಕೆಗೆ ಸುಮಾರು 08 ಸಾರಿ ಚುಚ್ಚಿದರು. ಇದನ್ನು ನಾನು ನೋಡಿದ್ದೇನೆ. ನಾನು, ಚಾಸಾ-10, 11, 12, 14, 15, 16, 17 ರವರು ಸೇರಿ ಗಲಾಟೆಯನ್ನು ಬಿಡಿಸಿದೆವು. ಚಾಸಾ-6 ರವರಿಗೆ ರಕ್ತ ಸುರಿಯುತ್ತಿತ್ತು.ಆದ್ದರಿಂದ ಅವರಿಗೆ ಟವಲ್ ನಿಂದ ಕಟ್ಟಿದೆವು. ನಂತರ ಆ್ಯಂಬೂಲನ್ಸಗೆ ಫೋನ್ ಮಾಡಿದೆವು, ನಂತರ ಚಾಸಾ-6 ರವರನ್ನು ಹೊನ್ನಾಳಿ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋದೆಪಿವು. ಅವರ ಸ್ಥಿತಿ ಗಂಭೀರ ಇರುವುದಾಗಿ ಹೇಳಿ ಚಾಸಾ-6 ರವರನ್ನು ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿದರು. ನಂತರ ನಾವು ಚಾಸಾ-6 ರವರನ್ನು ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಂತರ ಅಲ್ಲಿಂದ ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. 1 ನೇ ಆರೋಪಿಯು

ಕೃತ್ಯಕ್ಕೆ ಬಳಸಿದ ಚೂರಿಯನ್ನು ಈಗ ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.3 ಅಂತ ಗುರುತಿಸಲಾಗಿದೆ. ಚಾಸಾ-6 ರವರನ್ನು ಸಾಯಿಸುವ ಉದ್ದೇಶದಿಂದ ಈ ರೀತಿ ಚಾಕು ಹಾಕಿರುತ್ತಾರೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. 2 ನೇ ಆರೋಪಿಯು ಈ ದಿನ ಗೈರು ಹಾಜರಾಗಿದ್ದು,ಆತನನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇಲ್ಲ ಅಂತ ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿರುತ್ತಾರೆ. ಆ ದಿನ ಚಾಸಾ-6 ರವರು ಧರಿಸಿದ ಬಟ್ಟೆಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಅಂತ ಗುರುತಿಸಲಾಗಿದೆ. ಅವುಗಳ ಮೇಲೆ ರಕ್ತದ ಕಲೆಗಳು ಇರುತ್ತವೆ.

**ಪಾಟೀ ಸವಾಲುಃ ಶ್ರೀ ವಿ.ಟಿ., ವಕೀಲರಿಂದ ಆರೋಪಿತರ ಪರವಾಗಿ**:

3. ನಾವು, ಚಾಸಾ-6 ರವರು ಮತ್ತು ಆರೋಪಿತರು ಎಲ್ಲಾ ಜನಾಂಗದವರು ಅಂದರೆ ನಿಜ. ನಮಗೂ ಮತ್ತು ಆರೋಪಿತರಿಗೂ ರಾಜಕೀಯ ದ್ವೇಷ ಇದೆ ಅಂದರೆ ಸರಿಯಲ್ಲ. ನಾನುಜಗಳ ಬಿಡಿಸಲು ಹೋದಾಗ ಚಾಸಾ-6 ರವರಿಗೆ ಬರುತ್ತಿದ್ದ ರಕ್ತ ನನ್ನ ಬಟ್ಟೆಗೆ ಹತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದಾರೆ. ನಾನು ಹೇಳಿದ ರೀತಿಯಲ್ಲಿ ಗಲಾಟೆಯಾಗಿದ್ದು ಸುಳ್ಳು ಇರುತ್ತದೆ ಅಂದರೆ ಸರಿಯಲ್ಲ. 07-08 ಕಡೆ ಚಾಸಾ-6 ರವರಿಗೆ ಚೂರಿಯಿಂದ ಚುಚ್ಚಿದ್ದ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ-6 ಮತ್ತು ಅವರ ತಂದೆ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

4. ಚಾಸಾ-6 ರವರ ಹೊಟ್ಟೆಯಲ್ಲಿ ಗಡ್ಡೆ ಇದ್ದು, ಅದರ ಬಗ್ಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ ಅಂದರೆ ಸರಿಯಲ್ಲ. ಅದರ ಆಧಾರದ ಮೇಲೆ ಈ ರೀತಿ ಆರೋಪಿತರ ಮೇಲೆ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಮು.ಮಾ.3 ಸಂತೋಷರವರಿಗೆ ಸೇರಿದ್ದು ಅಲ್ಲ ಅಂದರೆ ಸರಿಯಲ್ಲ. ಮು.ಮಾ.1

ಮತ್ತು 2 ಚಾಸಾ-6 ರವರಿಗೆ ಸೇರಿದ್ದು ಅಲ್ಲ ಅಂದರೆ ಸರಿಯಲ್ಲ. ಮು.ಮಾ.3 ರ ಚೂರಿ ಎಲ್ಲಾ ಕಡೆ ಸಿಗುತ್ತದೆ ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.